ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಬೆವಿಕಂ/ನಿ(ಹ)ಪ್ರವ್ಯ(ಕಂ)/ಉಪ್ರವ್ಯ(ಕಂ)/ಸಪ್ರವ್ಯ(ಕಂ-1)/2202(42)/2021-22
ಲಗತ್ತು: ಸರ್ಕಾರದ ಆದೇಶ

CYS-04

ಕಂಪನಿ ಕಾರ್ಯಾಲಯ
ಕೆ.ಆರ್.ವೃತ್ತ, ಬೆಂಗಳೂರು-1
ದಿನಾಂಕ:

16 AUG 2021

## ಸುತ್ತೋಲೆ

**ವಿಷಯ:** ಆರ್ಥಿಕ ವರ್ಷ 2021-22 ನೇ ಸಾಲಿನ ಏಪ್ರಿಲ್-2021 ರಿಂದ ಜೂನ್-2021 ರ ಮಾಹೆಗಳಲ್ಲಿ ಹೋಟಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಸ್ಥಾವರಗಳ ವಿದ್ಯುತ್ ಬಿಲ್ಲುಗಳಲ್ಲಿನ ಬೇಡಿಕೆ/ನಿಗಧಿತ ಶುಲ್ಕವನ್ನು ಮನ್ನಾ ಮಾಡುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 295 ಪಿಎಸ್‌ಆರ್ 2021 ಬೆಂಗಳೂರು, ದಿನಾಂಕ: 04.08.2021.

*******

ಘನ ಕರ್ನಾಟಕ ಸರ್ಕಾರವು, ಕರ್ನಾಟಕ ಟೂರಿಸಂ ಟ್ರೇಡ್ ಫೆಸಿಲಿಟೇಶನ್(ಕೆ.ಟಿ.ಟಿ.ಎಫ್) ಕಾಯ್ದೆ ಅನ್ವಯ **ಪ್ರವಾಸೋದ್ಯಮ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ರಾಜ್ಯದ ಹೋಟಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳೆಂದು(Amusement Parks) ಪ್ರಾಧಿಕಾರದಿಂದ ಆದಾರವುಳ್ಳ ಪ್ರಮಾಣ ಪತ್ರ/ಪರವಾನಗಿಯನ್ನು ಹೊಂದಿರುವ (ಕೆ.ಟಿ.ಟಿ.ಎಫ್ ಕಾಯ್ದೆ 8/1 ರನ್ವಯ ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್‌ನಲ್ಲಿ ನೋಂದಣಿಯಾದ ಸದಸ್ಯರಿಗೆ)** ವಿದ್ಯುತ್ ಗ್ರಾಹಕರಿಗೆ **ಏಪ್ರಿಲ್ 2021 ರಿಂದ ಜುಲೈ 2021** ರ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ/ನಿಗಧಿತ ಶುಲ್ಕಗಳನ್ನು ಪಾವತಿಸುವುದರಿಂದ ವಿನಾಯಿತಿಯನ್ನು ಘೋಷಣೆ ಮಾಡಿರುತ್ತದೆ. ಸದರಿ ರಿಯಾಯಿತಿ/ಸೌಲಭ್ಯಯನ್ನು ವಿದ್ಯುತ್ ಗ್ರಾಹಕರುಗಳಿಗೆ ಒದಗಿಸಲು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು:

- ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳ ವಿದ್ಯುತ್ ಸ್ಥಾವರವು ಹಾಲಿ ಚಾಲ್ತಿಯಲ್ಲಿದ್ದು ಹಾಗೂ ದಿನಾಂಕ: 31.03.2021 ರ ಅಂತ್ಯಕ್ಕೆ ವಿದ್ಯುತ್ ಬಾಕಿ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿರಬೇಕು.
- ಈ ಪ್ರವರ್ಗದ ಗ್ರಾಹಕರುಗಳಿಗೆ ಈ ಅದಧಿಯಲ್ಲಿ (ಏಪ್ರಿಲ್ -21 ರಿಂದ ಜೂನ್ -21 ರವರೆಗೆ) ಈಗಾಗಲೇ ವಿದ್ಯುತ್ ಬಿಲ್ಲುಗಳನ್ನು ಪಾವತಿಸಿದ್ದರೆ ಅಂತಹ ಗ್ರಾಹಕರ ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು (Demand Charge/Fixed charge) ಮುಂದಿನ ಮಾಹೆಯ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳವುದು.
- ಕೆ.ಟಿ.ಟಿ.ಎಫ್ ಕಾಯ್ದೆ 8/1 ರನ್ವಯ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸತಕ್ಕದ್ದು. ಈ ಸಂಬಂಧ, ವೆಬ್‌ಸೈಟ್‌ನಲ್ಲಿ ನೋಂದಣಿಯಾದ ಸದಸ್ಯರಿಗೆ ಸದರಿ ರಿಯಾಯಿತಿ ನೀಡುವುದು.
- ಕೆ.ಟಿ.ಟಿ.ಎಫ್ ಕಾಯ್ದೆ ಪ್ರಕಾರ ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು((Demand Charge/Fixed charge) ಮನ್ನಾ ಮಾಡಲು ಈ ಆದೇಶಕ್ಕೆ ಲಗತ್ತಿಸಿರುವ ಹಾಗೂ ಸರ್ಕಾರ ಸೂಚಿಸಿರುವ ಅರ್ಜಿ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಸಂಬಂಧಿಸಿದ ಉಪವಿಭಾಗಕ್ಕೆ ಸಲ್ಲಿಸುವುದು. ಸಂಬಂಧಿಸಿದ ಉಪವಿಭಾಗಗಳಲ್ಲಿ ಅರ್ಜಿದಾರರು ಒದಗಿಸಿರುವ ಮಾಹಿತಿಯ ವಿವರಗಳನ್ನು ಪರಿಶೀಲಿಸುವುದು.

- ಅರ್ಹ ಫಲಾನುಭವಿ ಗ್ರಾಹಕರಿಗೆ ಬೇಡಿಕೆ/ನಿಗಧಿತ ಶುಲ್ಕವನ್ನು RAPDRP ಮತ್ತು TRM ತಂತ್ರಾಂಶದಲ್ಲಿ ಹೊಸದಾಗಿ ರಚಿಸಿರುವ **"Waiveoff on Demand/Fixed Charges for Hotels/resorts/Restaurants under Tourism Department"** ಹೊಂದಾಣಿಕೆಯನ್ನು ಆಯ್ಕೆ ಮಾಡಿ ಮನ್ನಾ ಮಾಡಬೇಕಿರುವ ಬೇಡಿಕೆ/ನಿಗಧಿತ ಶುಲ್ಕ ಮೊತ್ತವನ್ನು ನಮೂದಿಸಿ ಹೊಂದಾಣಿಕೆ ನೀಡುವುದು. **ಪ್ರತಿ ತಿಂಗಳು ಪ್ರತ್ಯೇಕ ಹೊಂದಾಣಿಕೆ ನೀಡತಕ್ಕದ್ದು.**
- ಸದರಿ ಗ್ರಾಹಕರಿಗೆ ನೀಡಲಾಗುವ ಬೇಡಿಕೆ/ನಿಗಧಿತ ಶುಲ್ಕದ ಹೊಂದಾಣಿಕೆಯು ಡಿ.ಸಿ.ಬಿ. ವರದಿಯ ವಸೂಲಾತಿ ಅಂಕಣದಲ್ಲಿ ಹೊಂದಾಣಿಕೆಯಡಿಯಲ್ಲಿ ಬರುವುದರಿಂದ, ಇದನ್ನು ತಿಂಗಳ ಕೊನೆಯಲ್ಲಿ ಸೂಕ್ತ ಪರಿಶೀಲನೆ ನಡೆಸಿ ಡಿಸಿಬಿ ಮೊತ್ತಕ್ಕೆ ತಾಳೆ ಮಾಡುವುದು ಮತ್ತು ಲೆಕ್ಕ ಶೀರ್ಷಿಕೆ **" 79.8867 "** ರಲ್ಲಿ ಲೆಕ್ಕೀಕರಿಸುವುದು.
- ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು((Demand Charge/Fixed charge)ಮನ್ನಾ ಮಾಡಿದ ಮೊತ್ತವನ್ನು ಸರ್ಕಾರದಿಂದ ಭರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಪ್ರವಾಸೋದ್ಯಮ ಇಲಾಖೆಯ ಮುಖಾಂತರ ಸಲ್ಲಿಸಬೇಕಾಗಿರುವುದರಿಂದ ರಿಯಾಯಿತಿ ಪಡೆದ ಗ್ರಾಹಕರ ವಿವರಗಳನ್ನು ಉಪವಿಭಾಗಗಳಿಂದ ಪ್ರತಿ ಮಾಹೆ 5 ನೇ ತಾರಿಖಿನೊಳಗೆ ನಿಗಧಿತ ನಮೂನೆಯಲ್ಲಿ ಪಡೆದು ಕ್ರೋಢೀಕರಿಸಿ ಲೆಕ್ಕಾಧಿಕಾರಿ (ಆಂ.ಪ) ರವರಿಂದ ದೃಢೀಕರಣ ಪಡೆದು ವಿಭಾಗೀಯ ಕಚೇರಿಯಿಂದ ಪ್ರಧಾನ ವ್ಯವಸ್ಥಾಪಕರು(ಕಂದಾಯ), ನಿಗಮ ಕಛೇರಿ ರವರಿಗೆ 10ನೇ ತಾರೀಖಿನೊಳಗೆ ತಪ್ಪದೇ ಸಲ್ಲಿಸುವುದು.
- ಹೊಂದಾಣಿಕೆ ವಿವರಗಳನ್ನು ಪ್ರತ್ಯೇಕ ರೆಜಿಸ್ಟರ್‌ನಲ್ಲಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ಡಾ॥ ಆರ್.ಸಿ. ಚೇತನ್ **IRS**
ನಿರ್ದೇಶಕರು (ಹಣಕಾಸು)

ಪ್ರತಿ:

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಇಂಜಿನಿಯರ್(ವಿ)/ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಬೆಂ.ಮ.ಕ್ಷೇ ಉತ್ತರ/ದಕ್ಷಿಣ/ಬೆಂ.ಗ್ರಾ.ಕ್ಷೇ/ಚಿ.ಕ್ಷೇ ವಲಯ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಪ್ರಧಾನ ವ್ಯವಸ್ಥಾಪಕರು (ಲೆ ಮತ್ತು ಜ) ಬೆವಿಕಂ, ನಿಗಮ ಕಾರ್ಯಾಲಯ ರವರ ಮಾಹಿತಿಗಾಗಿ ಹಾಗೂ ಲೆಕ್ಕೀಕರಿಸುವ ವಿಧಾನವನ್ನು ಕ್ಷೇತ್ರಾಧಿಕಾರಿಗಳಿಗೆ ಒದಗಿಸುವುದು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವೃತ್ತ ಇವರಿಗೆ ಸೂಕ್ತ ಕ್ರಮಕ್ಕಾಗಿ
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ
6. ಎಲ್ಲಾ ವಿಭಾಗೀಯ ಲೆಕ್ಕಾಧಿಕಾರಿ(ಆಂ.ಪ) ಶಾಖೆ, ಬೆವಿಕಂ ರವರ ಸೂಕ್ತ ಕ್ರಮಕ್ಕಾಗಿ
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಸಹಾಯಕ ಲೆಕ್ಕಾಧಿಕಾರಿಗಳು, ಬೆವಿಕಂ, ವಾ, ಕಾ ಮತ್ತು ಪಾ, ಉಪ-ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ.
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ) ಇವರ ಆಪ್ತ ಕಾರ್ಯದರ್ಶಿಗಳು ಬೆವಿಕಂ, ನಿಗಮ ಕಾರ್ಯಾಲಯ.
9. ಮಹಾಕಡತ/ಕಡತ

## ಅರ್ಜಿ ನಮೂನೆ

2021–22ನೇ ಆರ್ಥಿಕ ವರ್ಷದಲ್ಲಿ ಏಪ್ರಿಲ್–2021 ರಿಂದ ಜೂನ್–21ರವರೆಗಿನ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕವನ್ನು ಮನ್ನಾ ಮಾಡಲು ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳು ಸಲ್ಲಿಸಬೇಕಾದ ಅರ್ಜಿ ನಮೂನೆ:

| | | |
|---|---|---|
| 1. | ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಮಾಲೀಕರ ಹೆಸರು. | |
| 2. | ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಹೆಸರು, ಸಂಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆ. | |
| 3. | ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾವಣೆ ಆಗಿರುವ ಬಗ್ಗೆ ಮಾಹಿತಿ. | |
| 4. | ವಿದ್ಯುತ್ ಸ್ಥಾವರದ ಸಂಖ್ಯೆ, ಮಾಸಿಕ ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕ, ಜಕಾತಿ, ದಿನಾಂಕ: 31.03.2021ರ ಅಂತ್ಯಕ್ಕಿರುವ ವಿದ್ಯುತ್ ಬಾಕಿ ಶುಲ್ಕ, ಇತರೆ ವಿವರಗಳು. | |
| 5. | ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕವನ್ನು ಮನ್ನಾ ಮಾಡಲು ಕೋರಿರುವ ಅವಧಿ ಮತ್ತು ಒಟ್ಟು ಮೊತ್ತ. | |
| 6. | ಈ ಅವಧಿಯಲ್ಲಿ ಈಗಾಗಲೇ ಪಾವತಿಸಿರುವ ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕದ ವಿವರಗಳ ಮಾಹಿತಿ / ದಾಖಲೆಗಳನ್ನು ಒದಗಿಸುವುದು. | |
| 7. | ಈಗಾಗಲೇ ಪಾವತಿಸಿರುವ ವಿದ್ಯುತ್ ಬೇಡಿಕೆ / ನಿಗದಿತ ಶುಲ್ಕದ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲು ಕೋರುತ್ತಿರುವ ಅವಧಿ. | |
| 8. | ಇತರೆ ಮಾಹಿತಿಗಳು. | |

ಅರ್ಜಿದಾರರ ಸಹಿ

## ಸ್ವೀಕೃತಿ

2021–22ನೇ ಆರ್ಥಿಕ ವರ್ಷದಲ್ಲಿ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ಏಪ್ರಿಲ್–2021 ರಿಂದ ಜೂನ್–21ರವರೆಗಿನ ಮಾಹೆಗಳ ವಿದ್ಯುತ್ ಬಿಲ್ಲಿನ ಬೇಡಿಕೆ / ನಿಗದಿತ ಶುಲ್ಕವನ್ನು ಮನ್ನಾ ಮಾಡಲು ---------ರವರಿಂದ ಅರ್ಜಿ ಸ್ವೀಕರಿಸಿದೆ.

ದಿನಾಂಕ:

ಸಹಿ

Annexure -A

## Wavier Off On Fixed/Demand /Charges for Hotels/Resorts/Restauants under Tourism Department (Register to be Maintained at SDO)

| Sl.No. | RR Number | Tariff | Contract Demand/Sanctioned Load | Name of the Registered Consumer | Nature of Business | Certificate No & Issuing Auhtority | Certificate issued by | Month | Adjustment Amount | Adj No/Date | Signature | | |
|---|---|---|---|---|---|---|---|---|---|---|---|---|---|
| | | | | | | | | | | | Asst/SA | AAO | AEE |
| 1 | | | | | | | | Apr-21 conspn, May-21 bill | | | | | |
| | | | | | | | | May-21 conspn, June-21 bill | | | | | |
| 2 | | | | | | | | June-21 conspn, July-21 bill | | | | | |
| | | | | | | | | | | | | | |
| | | | | | | | | | | | | | |

**Consolidated report to be given at the end of the month**

**Wavier Off On Fixed/Demand /Charges for Hotels/Resorts/Restauants under Tourism Department for the month of _________**

| Sl.No. | RR Number | Tariff | Contract Demand/Sanction Load | Name of the Registered Consumer | Nature of Business | Certificate No & issuing Authority | Certificate given by | Adjustment Amount | Adj No/Date |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

**Asst Accounts Officer**
__________SDO

**Asst Executive Engineer**
__________SDO

**Certificate**

**Accounts Officer**
__________Division

**Executive Engineer**
__________Division

**AO (Internal Audit)**
__________Division

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಏಪ್ರಿಲ್-2021 ರಿಂದ ಜೂನ್-21ರವರೆಗಿನ ಮಾಹೆಗಳಲ್ಲಿ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ವಿದ್ಯುತ್ ಬಿಲ್ಲುಗಳಲ್ಲಿನ ವಿದ್ಯುತ್ ಬಿಲ್ಲಿನ ಬೇಡಿಕೆ/ನಿಗದಿತ ಶುಲ್ಕವನ್ನು ಮನ್ನಾ ಮಾಡುವ ಬಗ್ಗೆ.

**ಓದಲಾಗಿದೆ**:
1. ಪ್ರವಾಸೋದ್ಯಮ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ: ಪ್ರಿ/ಆಡಳಿತ-1/02/2021-22.
2. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 416 ವೆಚ್ಚ-7/2021, ದಿನಾಂಕ: 23.06.2021.
3. ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 24.06.2021ರಂದು ನಡೆದ ಸಭೆಯ ನಡವಳಿ.
4. ಪ್ರವಾಸೋದ್ಯಮ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ:DT-PUB3/11/2021.

**ಪ್ರಸ್ತಾವನೆ:**

1. ಉಲ್ಲೇಖದ ಕ್ರಮ ಸಂಖ್ಯೆ(1) ರಲ್ಲಿ ಓದಲಾದ ನಿರ್ದೇಶಕರ ಏಕ ಕಡತದಲ್ಲಿ, COVID-19 ರ ಸಾಂಕ್ರಾಮಿಕ ರೋಗದ ಅಲೆಯು ಪ್ರವಾಸೋದ್ಯಮ ವಲಯಕ್ಕೆ ತೀವ್ರತರದ ಹೊಡೆತವನ್ನು ನೀಡಿದ್ದು, ಇದರಿಂದ ಪ್ರವಾಸೋದ್ಯಮ ಉದ್ಯಮ ಸಂಕಷ್ಟದಲ್ಲಿರುವುದರಿಂದ ಕರ್ನಾಟಕ ಟೂರಿಸಂ ಸೊಸೈಟಿಯವರು ಪ್ರವಾಸೋದ್ಯಮದ ವಲಯವನ್ನು ಪುನರುಜ್ಜೀವನಗೊಳಿಸಲು ಪ್ಯಾಕೇಜ್ ಪಟ್ಟಿಗಳನ್ನು ಸಲ್ಲಿಸಿದ್ದು, ಬೇಡಿಕೆಗಳು ಈ ಕೆಳಕಂಡಂತಿದೆ.
    1. 2021-22ನೇ ಸಾಲಿನ ಹೋಟೆಲ್/ರೆಸಾರ್ಟ್/ರೆಸ್ಟೋರೆಂಟ್/ಅಮ್ಯೂಸ್‌ಮೆಂಟ್ ಪಾರ್ಕ್‌ಗಳ ಮೇಲಿನ ಆಸ್ತಿ ತೆರಿಗೆ ಪಾವತಿಸುವುದನ್ನು ಮನ್ನಾ ಮಾಡುವುದು.
    2. ಅಬಕಾರಿ ಪರವಾನಗಿ ಶುಲ್ಕದ ಪಾವತಿ ಮನ್ನಾ / ಮುಂದೂಡಿಕೆ.
    3. ವಿದ್ಯುತ್ ಬಿಲ್‌ಗಳಲ್ಲಿ ವಿನಾಯಿತಿ / ಮನ್ನಾ ಬೇಡಿಕೆ ಶುಲ್ಕ ಮನ್ನಾ.
    4. ವಾಹನ ತ್ರೈಮಾಸಿಕ ರಸ್ತೆ ತೆರಿಗೆಯನ್ನು 6 ತಿಂಗಳವರೆಗೆ ಪಾವತಿಸುವುದರಿಂದ ವಿನಾಯಿತಿ.
    5. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಅಸಂಘಟಿತ ಉದ್ಯೋಗಿಗಳಿಗೆ ಪ್ಯಾಕೇಜ್.
    6. ಪ್ರವಾಸೋದ್ಯಮ ವ್ಯಾಪಾರ ವಿಭಾಗಗಳಿಗೆ ಸಾಲ / ಪ್ರವಾಸೋದ್ಯಮ ವ್ಯಾಪಾರ ವರ್ಗಗಳಿಗೆ ಡಬ್ಲ್ಯೂಸಿ ಬೆಂಬಲ.
2. ಉಲ್ಲೇಖದ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 416 ವೆಚ್ಚ-7/2021, ದಿನಾಂಕ:23.06.2021ರಲ್ಲಿ ಈ ಕೆಳಕಂಡಂತೆ ಸಹಮತಿ ನೀಡಿದೆ.

    To waive off the fixed charges in electricity bills of hotels / resorts / restaurants / amusement parks for 3 months from April to June-2021.

3. ಉಲ್ಲೇಖದ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸಭೆಯ ನಡವಳಿಯಲ್ಲಿ ಶೇಕಡ 50 ರಷ್ಟು ಆಸ್ತಿ ತೆರಿಗೆ ಮತ್ತು 3 ತಿಂಗಳ ವಿದ್ಯುಚ್ಛಕ್ತಿ ಡಿಮ್ಯಾಂಡ್ / ಫಿಕ್ಸೆಡ್ ಶುಲ್ಕ ಮನ್ನಾ ಸವಲತ್ತನ್ನು ಪ್ರವಾಸೋದ್ಯಮ ವಲಯಕ್ಕೆ ತಲುಪಿಸಲು ಜಿಲ್ಲಾ ಮಟ್ಟ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಅನುಷ್ಠಾನ ಮತ್ತು ಮೇಲ್ವಿಚಾರಣೆ ನಡೆಸಲು ಸಮಿತಿಯನ್ನು ರಚಿಸಿದೆ.
4. ಉಲ್ಲೇಖದ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ನಿರ್ದೇಶಕರ ಏಕ ಕಡತದಲ್ಲಿ ದಿನಾಂಕ: 24.06.2021ರಂದು ನಡೆದ ಸಭೆಯ ತೀರ್ಮಾನದಂತೆ ಹಾಗೂ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯಂತೆ 2021-22ನೇ ಆರ್ಥಿಕ ವರ್ಷದಲ್ಲಿ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳ ವಿದ್ಯುತ್ ಬಿಲ್ಲುಗಳಲ್ಲಿನ ನಿಗದಿತ ಶುಲ್ಕವನ್ನು ಏಪ್ರಿಲ್-2021 ರಿಂದ ಜೂನ್-2021 ರವರೆಗೆ ಮನ್ನಾ ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು ರೂಪಿಸಲು ಇಂಧನ ಇಲಾಖೆಯನ್ನು ಕೋರುವಂತೆ ಪ್ರವಾಸೋದ್ಯಮ ಇಲಾಖೆಯ ಪ್ರವಾಸೋದ್ಯಮ ನಿರ್ದೇಶಕರು ಕೋರಿರುತ್ತಾರೆ.

ಅದರಂತೆ, ಪ್ರಸ್ತುತ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 295 ಪಿಎಸ್ಆರ್ 2021</u>**
**<u>ಬೆಂಗಳೂರು, ದಿನಾಂಕ: 04.08.2021.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ಟೂರಿಸಂ ಟ್ರೇಡ್ ಫೆಸಿಲಿಟೇಶನ್(ಕೆ.ಟಿ.ಟಿ.ಎಫ್) ಕಾಯ್ದೆ ಅನ್ವಯ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ರಾಜ್ಯದ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಉದ್ಯಾನವನಗಳೆಂದು ಪ್ರಾಧಿಕಾರದಿಂದ ಆಧಾರವುಳ್ಳ ಪ್ರಮಾಣ ಪತ್ರ / ಪರವಾನಗಿಯನ್ನು ಹೊಂದಿರುವ ಈ ಪ್ರವರ್ಗದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ರಾಜ್ಯ ಸರ್ಕಾರವು ಈ ಕೆಳಕಂಡ ಪರಿಹಾರವನ್ನು ನೀಡಲು ಆದೇಶಿಸಿದೆ.

1. **2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ಏಪ್ರಿಲ್-2021 ರಿಂದ ಜೂನ್ 2020-21ರವರೆಗಿನ ಮಾಹೆಗಳ ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು (Demand Charge/Fixed charge) ಮನ್ನಾ ಮಾಡಲು ಆದೇಶಿಸಲಾಗಿದೆ.**
2. **ಸದರಿ ಸೌಲಭ್ಯಗಳನ್ನು ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳಿಗೆ ಒದಗಿಸಲು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು:**
   - ಈ ಪ್ರವರ್ಗದ ವಿದ್ಯುತ್ ಗ್ರಾಹಕರುಗಳ ವಿದ್ಯುತ್ ಸ್ಥಾವರವು ಹಾಲಿ ಚಾಲ್ತಿಯಲ್ಲಿದ್ದು ಹಾಗೂ ದಿನಾಂಕ: 31.03.2021ರ ಅಂತ್ಯಕ್ಕೆ ವಿದ್ಯುತ್ ಬಾಕಿ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿರಬೇಕು.
   - ಈ ಪ್ರವರ್ಗದ ಗ್ರಾಹಕರುಗಳು ಈ ಅವಧಿಯಲ್ಲಿ (ಏಪ್ರಿಲ್-21 ರಿಂದ ಜೂನ್-21ರವರೆಗೆ) ಈಗಾಗಲೇ ವಿದ್ಯುತ್ ಬಿಲ್ಲುಗಳನ್ನು ಪಾವತಿಸಿದ್ದರೆ ಅಂತಹ ಗ್ರಾಹಕರ ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ/ ನಿಗದಿತ ಶುಲ್ಕವನ್ನು (Demand Charge/Fixed charge) ಮುಂದಿನ ಮಾಹೆಯ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು.
   - ಕೆ.ಟಿ.ಟಿ.ಎಫ್ ಕಾಯ್ದೆ 8/1 ರನ್ವಯ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸತಕ್ಕದ್ದು. ಈ ಸಂಬಂಧ, ವೆಬ್‌ಸೈಟ್‌ನಲ್ಲಿ ನೋಂದಣಿಯಾದ ಸದಸ್ಯರಿಗೆ ಸದರಿ ರಿಯಾಯಿತಿ ನೀಡುವುದು.
   - ಕೆ.ಟಿ.ಟಿ.ಎಫ್ ಕಾಯ್ದೆ ಪ್ರಕಾರ ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು (Demand Charge/Fixed charge) ಮನ್ನಾ ಮಾಡಲು ಈ ಆದೇಶಕ್ಕೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ ಸಂಬಂಧಿಸಿದ ಎಸ್ಕಾಂಗಳಿಗೆ ಸಲ್ಲಿಸುವುದು.
   - ಸಂಬಂಧಿಸಿದ ಎಸ್ಕಾಂಗಳಲ್ಲಿ ಅರ್ಜಿದಾರರು ಒದಗಿಸಿರುವ ಮಾಹಿತಿಯ ವಿವರಗಳನ್ನು ಪರಿಶೀಲಿಸುವುದು.
   - ವಿದ್ಯುತ್ ಬಿಲ್ಲಿನ ಕನಿಷ್ಠ ಬೇಡಿಕೆ / ನಿಗದಿತ ಶುಲ್ಕವನ್ನು (Demand Charge/Fixed charge) ಮನ್ನಾ ಮಾಡಿದ ಮೊತ್ತವನ್ನು ಸರ್ಕಾರದಿಂದ ಭರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಪ್ರವಾಸೋದ್ಯಮ ಇಲಾಖೆಯ ಮುಖಾಂತರ ಸಲ್ಲಿಸುವುದು.
3. ಈ ಆದೇಶವನ್ನು ಆರ್ಥಿಕ ಇಲಾಖೆಯು ಹಿಂಬರಹ ಸಂಖ್ಯೆ: ಆಇ 416 ವೆಚ್ಚ-7/2021, ದಿನಾಂಕ: 23.06.2021ರಲ್ಲಿ ಪ್ರವಾಸೋದ್ಯಮ ಇಲಾಖೆಗೆ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
4/8/21
(ಅಪರ್ಣಾ ಪಾವಟೆ),
ಸರ್ಕಾರದ ಅಪರ ಕಾರ್ಯದರ್ಶಿ,
ಇಂಧನ ಇಲಾಖೆ.

**<u>ಇವರಿಗೆ:</u>**

1. ಮಹಾಲೇಖಪಾಲರು (ಎ&ಇ) / (ಲೆಕ್ಕಪರಿಶೋಧನೆ-1 & ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ, ಮವಿಕಂ, ಹುವಿಕಂ, ಗುವಿಕಂ ಮತ್ತು ಚಾವಿಸನಿನಿ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ-1, ಮಿಲ್ಲರ್ಸ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-52.
9. ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿ, ಕವಿಪ್ರನಿನಿ/ಕವಿನಿನಿ/ಪಿಸಿಕೆಎಲ್/ಕ್ರೆಡಲ್.
10. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
12. ಶಾಖಾರಕ್ಷಾ ಕಡತ / ಹೆಚ್ಚುವರಿ ಪ್ರತಿ.